


# ಪ್ರತಿಕ್ರಿಯೆ

## ಸುಖಾಂತ್ಯಕ್ಕಾಗಿ ಧನ್ಯವಾದ

'ಅಂತಃಪುರ' ಧಾರಾವಾಹಿ (ವಸುಮತಿ ಉಡುಪ) ಪ್ರತಿವಾರ 'ಸುಧಾ'ಕ್ಕಾಗಿ ಕಾಯುವಂತೆ ಮಾಡಿತ್ತು. ಬದಲಾಗುತ್ತಿರುವ ಪ್ರಚಲಿತ ಕಾಲಘಟ್ಟವನ್ನು ಕಾದಂಬರಿ ರೂಪಕ್ಕೆ ತರುವಲ್ಲಿ ಲೇಖಕಿ ಅತ್ಯಂತ ಯಶಸ್ವಿಯಾಗಿದ್ದಾರೆ. ಕಥೆ ಸುಖಾಂತ್ಯಗೊಳಿಸಿದ್ದಕ್ಕಾಗಿ ಧನ್ಯವಾದಗಳು.

–ಶಶಿಧರ ಎಲೆ ಬೆಂಗಳೂರು
ಶೈಲಾ ಜೋಶಿ

## ಹೃದಯಂಗಮ-ಅರ್ಥಪೂರ್ಣ

ಬಹುಶಃ ಇತ್ತೀಚಿನ ವರ್ಷಗಳಲ್ಲಿ ಬಂದ ಅತ್ಯಂತ ಹೃದಯಂಗಮ ಧಾರಾವಾಹಿ ಇದು. ಮಲೆನಾಡಿನ ಅದ್ಭುತ ಚಿತ್ರಣದೊಂದಿಗೆ ಮಾನವ ಸಹಜ ಆದರ್ಶಗಳು, ದೌರ್ಬಲ್ಯಗಳನ್ನು ಸಮರ್ಥವಾಗಿ ಚಿತ್ರಿಸಿದ್ದಾರೆ. ಜನರೇಶನ್ ಗ್ಯಾಪ್ ಬಗ್ಗೆ ಸರಳವಾಗಿ ಹೇಳಿದ್ದಾರೆ. ಅಂತ್ಯ ಮಾತ್ರ ಯಾವುದೇ ಸಿನಿಮಾದ ಕ್ಲೈಮಾಕ್ಸ್‌ಗಿಂತಲೂ ಹೆಚ್ಚು. ಮೈದುನ ವೆಂಕಟರಮಣನನ್ನೂ ಮುನಿಸು ಮರೆಯುವಂತೆ ಮಾಡಬಹುದಿತ್ತು.

–ಬಿಲ್ಲೇಶ್ವರ ಅಚ್ಚು, ಹುಂಚ

ಹಿರಿಯ ಕಿರಿಯ ತಲೆಮಾರಿನ ಆಲೋಚನಾ ಲಹರಿ, ವರ್ತನೆಯಲ್ಲಿನ ವ್ಯತ್ಯಾಸವನ್ನು ಬಿಂಬಿಸುವುದರೊಂದಿಗೆ, ಇಂದಿನ ಸಮಾಜಕ್ಕೆ ಮಾದರಿಯಾಗುವಂತಹ ನಡೆಯೊಂದಿಗೆ ಧಾರಾವಾಹಿ ಸುಖಾಂತ್ಯವಾದುದನ್ನು ಕಂಡು ಸಮಾಧಾನವಾಯಿತು. ಮಲೆನಾಡಿನ ಭಾಷೆಯೊಂದಿಗೆ ಉತ್ತಮ ಧಾರಾವಾಹಿಯನ್ನು ನೀಡಿದ ಲೇಖಕಿಗೆ ಅಭಿನಂದನೆಗಳು.

–ಸತ್ಯವತಿ, ಕುಳಿಹಿತ್ಲು

## ಮುತ್ತಿನಂಥ ಕಾದಂಬರಿ

ಲೇಖಕಿ ನಿರೀಕ್ಷೆ ಮೀರಿ ಸುಖಾಂತ್ಯ ನೀಡಿ ನಿಜಕ್ಕೂ ಸಮಾಧಾನದ ನಿಟ್ಟುಸಿರು ಬಿಡುವಂತೆ ಮಾಡಿದ್ದಾರೆ. ಸಂಬಂಧಗಳ ನಡುವಿನ ಪ್ರೀತಿ ಎಷ್ಟು ಅವಶ್ಯಕ ಎಂದು ತೋರಿಸಿ ಕೊಟ್ಟಿದ್ದಾರೆ. ಮುತ್ತಿನಂಥ ಸಾಮಾಜಿಕ ಕಳಕಳಿಯ, ಕಾದಂಬರಿಗಳು ಇನ್ನಷ್ಟು ಮೂಡಿಬರಲಿ.

–ಅನುಪಮಾ ಕುಲಕರ್ಣಿ, ಧಾರವಾಡ,
ಅನ್ನಪೂರ್ಣಾ ಎಚ್.ಎಸ್.

## ಪ್ರಸನ್ನನಂತಹ ಮಗ ಎಲ್ಲರಿಗಿರಲಿ

ಸಂಸಾರದ ಸ್ವರ್ಗ ನರಕಗಳನ್ನು, ಅದರಲ್ಲೂ ಮೂಲೆಯಲ್ಲಿ ಅವಿತುಕೊಂಡಂತಿದ್ದ ನೋವುಗಳನ್ನೂ ಬಿಡದೆ ಎಳೆದುತಂದು ಓದುಗರೆದು ಕಾದಂಬರಿಗಾರ್ತಿ ಅನಾವರಣಗೊಳಿಸಿದ್ದಾರೆ. ಎಲ್ಲ ಮುಗಿದು ಇನ್ನೇನು ವೃದ್ಧಾಶ್ರಮ ಅನ್ನುವಷ್ಟರಲ್ಲಿ ಎಂಥ ಸುಂದರ ತಿರುವು! ಕಾದಂಬರಿಯ ಎಲ್ಲ ಪ್ರಸಂಗಗಳೂ, ತೊಳಲಾಟಗಳೂ ನಮ್ಮಲ್ಲೇ ನಡೆಯುತ್ತಿರುವಂತೆ ಚಿತ್ರಿಸುವ ವಸುಮತಿ ಉಡುಪ ಅವರಿಗೆ ಅಭಿನಂದನೆಗಳು. ಸಿಹಿಯಾದ ಮುಕ್ತಾಯವಾದರೂ ಓದುವಾಗ ಕಣ್ಣೀರು ಸುರಿಯಿತು. ಎಲ್ಲ ತಾಯಿ ತಂದೆಯರಿಗೂ ಪ್ರಸನ್ನನಂತಹ ಮಗ ಇರಲಿ.

–ಚಂಪಾ ಸಿ.ಆರ್.

ಕೊನೆಯ ಮೂರು ವಾರ ಓದುತ್ತಿದ್ದಾಗ ಕಣ್ಣೀರು ಹೋಗಿದ್ದು ಗೊತ್ತಾಗಲಿಲ್ಲ. ದೊಡ್ಡಮಗನಾಗಿ ಶಿವರಾಮನಿಗೆ ಬುದ್ಧಿ ಬರಲೇ ಇಲ್ಲ. ಸೀತಾಲಕ್ಷ್ಮಿ ಮೊಂಡು ಗಂಡನ ಜೊತೆಗೆ ಏಗಿದ್ದು ಸಾಹಸವೇ ಸರಿ. ಕಮಲಾ ಮತ್ತು ವೆಂಕಟರಾಮು ಸೀತಾಲಕ್ಷ್ಮಿ ಎಲ್ಲರನ್ನು ಒಂದು ಮಾಡಿದ ಪ್ರಸನ್ನ ಸುಖಾಂತ್ಯ ಮಾಡಿದ್ದು ಸಂತೋಷ.

–ಮೇಘನಾ ರಘುನಂದನ್, ಹೂವಿನಹಡಗಲಿ,
ಭಾರತೀ ಗಂಗಾಧರ್, ಬೆಂಗಳೂರು

## ನೈಜತೆಯ ಪ್ರತಿರೂಪ

ದರ್ಪ ದೌರ್ಜನ್ಯದ ನಡವಳಿಕೆಯ ಪ್ರತಿಫಲವಾಗಿ ಆಸ್ತಿ, ಮನಶಾಂತಿ, ಆರೋಗ್ಯ ಎಲ್ಲ ಕಳೆದುಕೊಂಡ ಶಿವರಾಮ, ಹಾಗೇ ತನ್ನ ಉತ್ತಮ ಮಾನವೀಯ ಗುಣಗಳಿಂದ ಸುಖವಾಗಿ ಬಾಳುವ ವೆಂಕಟರಾಮು, ನಡುವೆ ಸಹೃದಯದಿಂದ ಕಷ್ಟಗಳೊಂದಿಗೆ ಸಂಘರ್ಷಿಸಿ ಕೊನೆಗೂ ನೆಮ್ಮದಿಯ ಬದುಕು ಪಡೆದಳು ಸೀತಾಲಕ್ಷ್ಮಿ. ಕಥೆ ನೈಜತೆಯ ಪ್ರತಿರೂಪವಾಗಿದ್ದು ಆಸಕ್ತಿಯಿಂದ ಓದಿಸಿಕೊಂಡು ಹೋಯಿತು.

–ಚನ್ನಮ್ಮ ಹಿರೇಮಠ

ಧಾರಾವಾಹಿ ಮುಗಿದಾಗ ನನ್ನ ಕಣ್ಣುಗಳು ಒದ್ದೆಯಾದವು. ಜೀವನದ ಸತ್ಯಗಳು, ಮನುಷ್ಯನ ಅರಿಷಡ್ವರ್ಗಗಳ ಪರಿಚಯ ಮಾಡಿಸುವ ಚಿತ್ರಣ ಇದಾಗಿದೆ.

–ನಾಗರತ್ನ ಪಾಳ್ಯಂ, ಮೈಸೂರು

## 'ಸುಧಾ'ಕ್ಕಾಗಿ ತುದಿಗಾಲಲ್ಲಿ ನಿಲ್ಲುತ್ತಿದ್ದೆ

ಅಂತಃಪುರ ಕಥಾವಸ್ತು ಹೆಚ್ಚಿನ ಹಿರಿಯ ಜೀವಗಳ ಅನುಭವವೇ. ಪ್ರತಿ ವಾರವೂ 'ಸುಧಾ'ಳಿಗಾಗಿ ತುದಿಗಾಲಲ್ಲಿ ನಿಂತು ಕಾಯುತ್ತಾ ಇದ್ದೆ. ಇಂತಹ ಧಾರಾವಾಹಿಗಳು ಇನ್ನೂ ಮೂಡಿಬರಲಿ.

–ಜಯಲಕ್ಷ್ಮಿ ಈಶಾನ್ಯ, ಪುತ್ತೂರು, ತಿ. ನಿರಂಜನ, ಬೆಂಗಳೂರು, ಟಿ. ರೇವತಿ, ಗಿರಿಜಾಂಬ ಬೆಂಗಳೂರು, ಶ್ರೀದೇವಿ ಯಾಜಿ, ಜಯಲಕ್ಷ್ಮಿ ವೀರಣ್ಣ, ಬಿ.ಶೋಭಾ ಅರಸ, ತೆಕ್ಕಟ್ಟೆ

## 80ರ ದಶಕದ ಧಾರಾವಾಹಿಯಂತಿತ್ತು

ಕಲಾವಿದ ಮೋನಪ್ಪ ಅವರ ಕಲೆಯಲ್ಲಿ ಮೂಡಿಬಂದ ಧಾರಾವಾಹಿ, ದೂರದರ್ಶನದಲ್ಲಿ 1980ರ ದಶಕದಲ್ಲಿ ಪ್ರಸಾರ ಮಾಡುತ್ತಿದ್ದ ಧಾರಾವಾಹಿಯನ್ನು ನೋಡಿದ ಹಾಗೆನಿಸಿತು. ಕೆಲವು ಸನ್ನಿವೇಶಗಳು ನಾವೇ ಅಲ್ಲಿರುವಂತೆ ಭಾಸವಾಗುತ್ತಿತ್ತು. ಕಥಾನಾಯಕಿ ಸೀತಮ್ಮ ಮತ್ತು ನಾಯಕ ಶಿವರಾಮನಂಥವರು ನಮ್ಮ ಸಮಾಜದಲ್ಲಿ ತುಂಬ ಕಾಣಿಸುತ್ತಾರೆ. ಬ್ಯಾಂಕಿನಲ್ಲಿ ಕಾರ್ಯನಿರ್ವಹಿಸುತ್ತಿದ್ದ ವೇಳೆಯಲ್ಲಿ 'ಪಿಂಚಣಿ ವಿಭಾಗ'ದಲ್ಲಿ ಅನೇಕ ಹಿರಿಯ ಜೀವಗಳು ಅವರ ಅನುಭವಗಳನ್ನು ನನ್ನಲ್ಲಿ ಹಂಚಿಕೊಳ್ಳುತ್ತಿದ್ದುದು ಮನಃಪಟಲದ ಮುಂದೆ ಬಂದಿತು.

–ಕಮಲಾದೇವಿ ರಾಜಶೇಖರ ಹಳ್ಳೂರ್

ತಾನು ಬಾಳಿದ ಮನೆ ಬಿಟ್ಟು, ನಗರಕ್ಕೆ ಬಂದು ಗಂಡನನ್ನು ಕಳೆದುಕೊಂಡು ಒಂಟಿಯಾಗಿದ್ದ ಸೀತಾಲಕ್ಷ್ಮಿಗೆ ಕಡೆಯಲ್ಲಿ ಮಗ ಅವಳನ್ನು ಹಳ್ಳಿಗೆ ಕರೆದುಕೊಂಡು ಹೋಗಿ ಬಿಟ್ಟು ಮತ್ತೆ ಅವಳಿಗೆ ಖುಷಿ ಕೊಟ್ಟಿದ್ದು ಸರಿಯಾಗಿದೆ.

–ಅನುರಾಧ ರಾಮಚಂದ್ರ, ಬೆಂಗಳೂರು, ಲತಾ ವಿ., ಬೆಂಗಳೂರು, ವಿದ್ಯಾ ಶೆಣೈ ಕುಂದಾಪುರ, ಟಿ.ಎಸ್ .ಪ್ರತಿಭಾ, ಚಿತ್ರದುರ್ಗ, ಶಾಂತಕುಮಾರ್ ಸರ್ಜಾಪುರ

ಧಾರಾವಾಹಿಯು ಹಿರಿಯ ಕಿರಿಯ ತಲೆಮಾರಿನ ಆಲೋಚನಾ ಲಹರಿ, ವರ್ತನೆಯಲ್ಲಿನ ವ್ಯತ್ಯಾಸವನ್ನು ಬಿಂಬಿಸುವುದರೊಂದಿಗೆ, ಇಂದಿನ ಸಮಾಜಕ್ಕೆ ಮಾದರಿಯಾಗುವಂತಹ ನಡೆಯೊಂದಿಗೆ ಸುಖಾಂತ್ಯವಾದುದನ್ನು ಕಂಡು ಮನವು ಸಮಾಧಾನ ಹೊಂದಿತು.

–ಸು. ವಿಜಯಲಕ್ಷ್ಮಿ, ಶಿವಮೊಗ್ಗ,
ಸಿ. ಸರಳಮಣಿ, ಮೈಸೂರು

## ಕುವೆಂಪು ನೆನಪಾದರು

ಮಲೆನಾಡಿನ ಹೆಣ್ಣುಮಕ್ಕಳ ಪರಿಚಯದ ಕೆಲವೊಂದು ಸಾಲುಗಳು ಕುವೆಂಪುರವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಇರುವಂತೆ ಭಾಸವಾಗುತ್ತದೆ. ಗಂಡಸರ ವೈಚಾರಿಕತೆ, ವಿಚಾರಗಳು ಹೆಂಗಸರ ಮೇಲೆ ತೋರುವ ಅಸಡ್ಡೆ, ಸೀತಮ್ಮನ ತೊಳಲಾಟಗಳು ದೊಡ್ಡ ಸಂಸಾರದ ಆಚಾರ ವಿಚಾರಗಳು ಹಾಗೂ ಹಬ್ಬ ಹರಿದಿನಗಳು ಎಲ್ಲ ಕಣ್ಣಿಗೆ ಕಟ್ಟುವಂತೆ ಬರೆದಿದ್ದಾರೆ.

–ಕವಿತಾ ಅಶೋಕ್, ನೆಲಮಂಗಲ, ಪಿ.ಹೆಚ್. ಪಾಟೀಲ್, ರಾಣೆಬೆನ್ನೂರ, ಉಷಾ ಎಸ್. ಹಾಸನ, ಜಯಲಕ್ಷ್ಮಿ ಉಪಾಧ್ಯಾಯ. ಕಂಚಾರ್ತಿ, ಎಸ್.ವಿ. ಗೋಪಾಲ್ ರಾವ್, ಬೆಂಗಳೂರು

## ಅಂತಃಕರಣ ಮಿಡಿಯಿತು

ಕೊರೊನಾ ಸಂದರ್ಭ ಸೃಷ್ಟಿಸಿದ ಸಂಕಷ್ಟದ ಸನ್ನಿವೇಶದಿಂದ ಪ್ರಾರಂಭವಾದ ಕಾದಂಬರಿಯು ಮಲೆನಾಡ ಪರಿಸರದ ಹಿನ್ನೆಲೆಯಲ್ಲಿ ವೈವಿಧ್ಯಮಯ ಮಾನವ ಒಳತೋಟಿಗಳನ್ನು ಓದುಗರ ಅಂತಃಕರಣ ಮಿಡಿಯುತ್ತಲೇ ಪ್ರಸ್ತುತಪಡಿಸಿರುವ ರೀತಿ ವಿಶಿಷ್ಟವಾದುದು.

–ಕೆ.ಆರ್. ಉಮಾದೇವಿ ಉರಾಳ, ತೀರ್ಥಹಳ್ಳಿ, ಜಿ.ಮೃತ್ಯುಂಜಯ, ಬೆಂಗಳೂರು